ಧಾರ್ಮಿಕ ದತ್ತಿ ಇಲಾಖೆಯಲ್ಲಿ ವರ್ಗಾವಣೆ ಕುರಿತು.

2825: (3780)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರ್ಮಿಕ ದತ್ತಿ ಇಲಾಖೆಯಲ್ಲಿ 1997-98 ಮತ್ತು 1998-99ನೇ ಸಾಲಿನ ಅಕ್ಟೋಬರ್ 15ರ ಒಳಗೆ ಎಷ್ಟು ಮಂದಿ ಅಧಿಕಾರಿಗಳನ್ನು (ವಿವಿಧ ಹುದ್ದೆಯಲ್ಲಿ) ವರ್ಗಾಯಿಸಲಾಗಿದೆ.

2) ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಯಗಳು ಎಷ್ಟು?

3) ಆಮಾನತ್ತಿನಲ್ಲಿದ್ದ ಎಷ್ಟೋ ಅಧಿಕಾರಿಗಳನ್ನು ಮರು ವಿಚಾರಣೆ ನಡೆಸದೆ 'ಬಿ' ರಿಪೋರ್ಟು ಹಾಕಿ ಪ್ರಾಮುಖ್ಯವಾದ ಜಾಗಕ್ಕೆ ವರ್ಗಾಯಿಸಿರುವುದು ನಿಜವೇ ಇದಕ್ಕೆ: ಕಾರಣಗಳೇನು? (ವಿವರ ನೀಡುವುದು)

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

1)

	1997-98	1998-99
ಸಮೂಹ - ಎ	3	6
ಸಮೂಹ- ಬಿ	ಇಲ್ಲ	3
ಒಟ್ಟು	3	9

2) ಒಂದು (1)

3) ಇಂತಹ ಪ್ರಕರಣಗಳು ಯಾವುದು ಇಲ್ಲ.

ನೆರಳಿನ ಭಾಗ್ಯ ಯೋಜನೆ.

2826: (3799)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?